NOTICE OF PRIVILEGE BY SRI H. N. NANJE GOWDA

Sri H. N. NANJE GOWDA (Arkalagud).—Sir, the other day I had moved a Privilege Motion.

Mr. SPEAKER.—Hon'ble Member Sri H. N. Nanje Gowda has given notice of a Motion of Breach of Privilege against the Hon'ble Minister for Public Works, Sri K. Lakkappa. Before giving my consent whether to admit that Motion under Rule 177 or not, I would like to hear a brief statement from the both the sides. The statement should be brief, and if members become emotional they may lose the points.

Sri H. SIDDAVEERAPPA.—Today seems to be a day of privileges!

Mr. SPEAKER. Everybody has agreed to.

† ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸಭಾಧ್ಯಕ್ಷರೇ, ನಾನು ಹಿಂದೆ ಕಳುಹಿಸಿದಂಥಾ ಹಕ್ಕುಬಾಧ್ಯತಾ ನಿರ್ಣಯವನ್ನು ಹೇಳತಕ್ಕಂಥಾ ಕಾಲದಲ್ಲಿ ನಾನು ರಾಜ್ಯಾಂಗದತ್ತವಾಗಿ ಈ ಸಭೆಗೆ ಅರಕಲಗೂಡು ಕ್ಷೇತ್ರದಿಂದ ಚುನಾಯಿತನಾಗಿ ಬಂದಂಥ ಸದಸ್ಯ. ನನ್ನ ಕ್ಷೇತ್ರಕ್ಕೆ ಆಗಸ್ಟ್ ತಿಂಗಳು ದಿನಾಂಕ 15, 16 ರಂದು ಮಾನ್ಯ ಮಂತ್ರಿಗಳಾದ ಶ್ರೀ ಕೆ. ಲಕ್ಕಪ್ಪನವರು ಅಧಿಕಾರಯುತವಾಗಿ ಒಂದು ಪ್ರವಾಸವನ್ನು ಕೈಗೊಂಡಿದ್ದಾರೆ. ಈ ಪ್ರವಾಸವನ್ನು ಕೈಗೊಂಡಂಥ ಕಾಲದಲ್ಲಿ ಅವರ ಪ್ರವಾಸದ ಬಗ್ಗೆ ನನಗೆ ತಿಳಿಯಬಯಸಿರಲಿಲ್ಲ. ಅಲ್ಲಿ ಅವರು ಭಾಗವಹಿಸಿದಂತಹ ಅನೇಕ ಸಭೆಗಳಲ್ಲಿ ನನ್ನನ್ನು ಕುರಿತು, ನನ್ನ ಹಕ್ಕು ಬಾಧ್ಯತೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ನನ್ನ ದಕ್ಷತೆಯ ಬಗ್ಗೆ ಹಾಗೂ ಈ ಸಭೆಯ ಸದಸ್ಯನಾಗಿ ಭಾಗವಹಿಸತಕ್ಕ ಕಾಲದಲ್ಲಿ ನಾನು ನಡೆಸಿದಂತಹ ಕಾರ್ಯಗಳ ಬಗ್ಗೆ ಪ್ರಶ್ನಿಸಿ ನಾನು ನಾಲಾಯಕ್, ದಕ್ಷತೆ ಇಲ್ಲದ ಮನುಷ್ಯ ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕ ರೀತಿಯಲ್ಲಿ ವಿರೋಧ ಪಕ್ಷಕ್ಕೆ ವೋಟು ಕೊಟ್ಟರೆ ಈ ಅರಕಲಗೂಡು ಕ್ಷೇತ್ರಕ್ಕೆ ಏನೂ ಆಗುತ್ತಿಲ್ಲ, ಅವರು ಏನೂ ಮಾಡುತ್ತಿಲ್ಲ, ಕಾರಣ ವಿರೋಧ ಪಕ್ಷಕ್ಕೆ ಇಲ್ಲಿನ ಜನತೆ ವೋಟು ಕೊಟ್ಟಿದ್ದೀರಿ, ಎನ್ನುವ ಪ್ರಶ್ನೆಯನ್ನು ಕೂಡ ಎತ್ತಿ ನನ್ನ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ತಂದಿದ್ದಾರೆ. ಅವರು ಅನೇಕ ಸಭೆಗಳಲ್ಲಿ ಭಾಗವಹಿಸಿ, ರಾಮನಾಥಪುರ ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ನಡೆದಂಥ ಸಭೆಯಲ್ಲಿ, ಕೋಣನೂರು ಹೋಬಳಿ ಹದರಂಗಿಯಲ್ಲಿ ನಡೆದಂಥ ಸಭೆಯಲ್ಲಿ, ಈ ಎರಡು ಸಭೆಗಳಲ್ಲಿ ಮಾತನಾಡಿದಂತಹ ಕಾಲದಲ್ಲಿ, ಈ ಎರಡು ಸಭೆಗಳಲ್ಲಿ ಮಾತನಾಡತಕ್ಕ ಕಾಲದಲ್ಲಿ ಎಲ್ಲಾ ಜನತೆ ಅಲ್ಲಿ ಸೇರಿದಂಥಾ ಸಭೆಯಲ್ಲಿ ಮಾನ್ಯ ಮಂತ್ರಿಗಳಿಗೆ ವಿನ್ನವತ್ತಳೆಯನ್ನು ಕೊಟ್ಟಂತಹ ಕಾಲದಲ್ಲಿ ಅದರಲ್ಲಿ ಕೆಲ ಕೆಲವಾರು ಕೆಲಸಕಾರ್ಯಗಳನ್ನು ಮಾಡಿಕೊಡಬೇಕೆಂದು ನಮೂದಿಸಿದ್ದರು. ಆ ವಿನ್ನವತ್ತಳೆಗೆ ಉತ್ತರ ನೀಡುವಾಗ ಮಂತ್ರಿಗಳಿಗೆ ಕೆಲಸ ಮಾಡಿಕೊಡಿ ಎಂದು ಕೇಳಿದ್ದೀರಿ. ಇದು ಮಾಮೂಲು ಅದನ್ನು ಮಾಡಬೇಕು ಅನಿಸುತ್ತದೆ. ವೋಟು ಕೊಡತಕ್ಕ ಕಾಲದಲ್ಲಿ ಯಾರು ಯಾರಿಗೋ ವೋಟು ಕೊಟ್ಟಿದ್ದೀರಿ, ಶ್ರೀಮಾನ್ ತಿಮ್ಮಪ್ಪಗೌಡರು ಹೇಳುತ್ತಾರೆ ಆ ಕೆಲಸಗಳನ್ನು ಮಾಡಿಕೊಡಿ ಎಂದು. ನಿಮ್ಮ ಪರವಾಗಿ ಹೇಳುವುದಕ್ಕೆ ಅವರಿಂದ ಏನೂ ಆಗುವುದಿಲ್ಲ. ನೀವು ಯಾರು ಯಾರಿಗೋ ವೋಟು ಕೊಟ್ಟಿದ್ದೀರಿ, ಆ ಮನುಷ್ಯರಿಂದ ನಂಜೇಗೌಡರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ರಾಜ್ಯವನ್ನು ಆಳುತ್ತಾ ಇರುವವರು ಕಾಂಗ್ರೆಸ್ಸಿನವರು, ವಿರೋಧ ಪಕ್ಷದವರಿಗೆ ವೋಟು ಕೊಟ್ಟರೆ ನಿಮ್ಮ ಕಾರ್ಯ ಏನಾಗುತ್ತದೆ? ಎಂದು ಪ್ರಶ್ನಿಸಿ ಈ ವಿಚಾರಗಳನ್ನು ನನ್ನ ಮತದಾರರ ಮುಂದೆ ವ್ಯಕ್ತಪಡಿಸಿದ್ದಾರೆ. ಈ ಅಂಶಗಳನ್ನು ಗಮನಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಟೂರ್ ಪ್ರೋಗ್ರಾಮನ್ನು ಕಳುಹಿಸಬೇಕಾದರೆ ಮಾಮೂಲಾಗಿ ಕಾರ್ಯದರ್ಶಿಗಳು ಕಳುಹಿಸುತ್ತಾರೆ. ಅದು ನೇರವಾಗಿ ಸದಸ್ಯರಿಗೆ ತಲಪುತ್ತದೆ ಎರಡನೆಯದು ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತಾರೆ, ಅವರು ಅದನ್ನು ಕಾಪಿ ಮಾಡಿಸಿ ಉಳಿದವರಿಗೆ ಕಳುಹಿಸುತ್ತಾರೆ. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಂದಲಾಗಲೀ, ಅಥವಾ ಕಾರ್ಯದರ್ಶಿಗಳಿಂದಲಾಗಲೀ ಯಾವ ಕಾರಣದಿಂದಲೋ ಏನೋ ನನಗೆ ಮಂತ್ರಿಗಳ ಟೂರ್ ಪ್ರೋಗ್ರಾಮ್ ನನಗೆ ಬರಲಿಲ್ಲ. ನನಗೆ ಅನಿಸುತ್ತದೆ ಏನೋ ಉದ್ದೇಶ ಇಟ್ಟುಕೊಂಡು ನನಗೆ ಟೂರ್ ಪ್ರೋಗ್ರಾಮ್ ತಲಪಿಸಿಲ್ಲ ಎಂದು. Wilfully, purposefully and with an ulterior motive to promote their own party interest ಎನ್ನುವ ಉದ್ದೇಶವನ್ನು ಇಟ್ಟುಕೊಂಡು ನನಗೆ ಟೂರ್ ಪ್ರೋಗ್ರಾಮನ್ನು ಕಳುಹಿಸಿಲ್ಲ. ಅವರು ಹೋದ ಕಡೆಯಲ್ಲಿ ನಾನು ಹೋದರೆ ಏನಾಗುತ್ತದೆಯೋ ಎನ್ನುವ ಒಂದು ಆಂಜಿಕೆಯಿಂದಲೂ ಮತ್ತು

(ಶ್ರೀ ಎಚ್. ಎನ್. ನಂಜೇಗೌಡ)

ಅವರ ಇಚ್ಛೆಯಂತೆ ಮಾತನಾಡುವುದಕ್ಕೆ ಆಗುವುದಿಲ್ಲ ಎಂತಲೂ ನನಗೆ ಟೂರ್ ಪ್ರೋಗ್ರಾಮ್ ಕಳುಹಿಸಿಲ್ಲ ಎಂದು ಅರ್ಥವಾಗುತ್ತದೆ.

ಇನ್ನು ಎರಡನೆಯದು ಈ ಸಭೆ ನಡೆಯುತಕ್ಕ ಕಾಲದಲ್ಲಿ ನಮ್ಮ ಕ್ಷೇತ್ರದಲ್ಲಿ ಇವರು ಪ್ರವಾಸವನ್ನು ಕೈಗೊಂಡಿದ್ದಾರೆ. ಈ ಪ್ರವಾಸ ಖಾಸಗೀ ಪ್ರವಾಸವಲ್ಲ. ಇದು ಪ್ರಮುಖವಾಗಿ ಗಮನಿಬೇಕಾದ ಅಂಶ. ಸರ್ಕಾರದ ಕಾರಿನಲ್ಲಿ, ಸರ್ಕಾರದ ಖರ್ಚಿನಲ್ಲಿ ಇವರು ತಾಲ್ಲೂಕುಗಳಿಂದ ಹೊರಟ ಮಾಡಿದ್ದಾರೆ. ಇವರು ಅಧಿಕಾರಯುತವಾಗಿ ಪ್ರವಾಸವನ್ನು ಕೈಗೊಂಡಾಗ ಈ ಸಭೆ ನಡೆಯುತ್ತಿತ್ತು. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮೇ|| ಪಾರ್ಲಿಮೆಂಟರಿ ಪ್ರಾಕ್ಟೀಸ್ ಎಂಬ ಪುಸ್ತಕದಲ್ಲಿ ಪುಟ 69 ರಲ್ಲಿ

> "privilege is always associated with the service of the House, it is limited to a period comprised by the duration of the session, together with a convenient and reasonable time before and after the meeting of Parliament. This convenient and reasonable time has generally been taken to be forty days before and after a session of Parliament."

ಎಂದು ಹೇಳಿದ್ದಾರೆ. ಈಗ ಆಗಸ್ಟ್ ತಿಂಗಳು 15, 16 ನೇ ದಿನಾಂಕ ಮಾನ್ಯ ಮಂತ್ರಿಗಳು ಟೂರ್ ಪ್ರೋಗ್ರಾಮ್ ಹಾಕಿಕೊಂಡಿದ್ದಾರೆ. ಸೆಪ್ಟೆಂಬರ್ ತಿಂಗಳು 2 ನೇ ತಾರೀಖು ಈ ಸಭೆ ಪ್ರಾರಂಭವಾಗಿದೆ. ಇದು 40 ದಿವಸಗಳ ಒಳಗಡೆ ಸೇರಿದೆ. ಸಭೆ ನಡೆಯುತಕ್ಕ ಕಾಲದಲ್ಲಿ ಇವರು ಅಧಿಕೃತವಾದ ಟೂರ್ ಪ್ರೋಗ್ರಾಮ್ ಹಾಕಿಕೊಂಡಿದ್ದಾರೆ. ಇದರಲ್ಲಿ ನನ್ನ ಹಕ್ಕುಬಾಧ್ಯತೆಗೆ ಚ್ಯುತಿ ಬಂದಿದೆ ಎಂದು ಹೇಳುವುದರ ಸಂಬಂಧದಲ್ಲಿ ನಾನು ಮೇಲೆ ಹೇಳಿದ ಪುಸ್ತಕದ ಪುಟ 123ರಲ್ಲಿ:

> "Conduct not amounting to a direct attempt to influence a Member in the discharge of his duties, but having a tendency to impair his independence in the future performance of his duty, will also be treated as a breach of privilege."

ಎಂದು ಹೇಳಿದೆ. ಈ ಕಾರಣಗಳಿಂದ ನನ್ನ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬಂದಿದೆ. ನನ್ನನ್ನು ಅದಕ್ಷ ಸದಸ್ಯ ಎಂದು ಹೇಳಿದ್ದಾರೆ. ಇದರಿಂದ ನನ್ನ ಮನಸ್ಸಿಗೆ ನೋವಾಗಿ ನಾನು ಲವಲವಿಕೆಯಿಂದ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಕಷ್ಟವಾಗಿದೆ. ಊಹಿಸದಂತಹ ರೀತಿಯಲ್ಲಿ ರಿಜಿಡಿಟಿಯನ್ನು ಕ್ರಿಯೆಟ್ ಮಾಡಿದ್ದಾರೆ. I am a constitutionally elected representative to represent the voters of Arkalgud constituency. ನನ್ನ ಕ್ಷೇತ್ರದ ಮತದಾರರಲ್ಲಿ ತಪ್ಪು ಅಭಿಪ್ರಾಯವನ್ನು ನೀಡಿ ಅವರು ಲವಲವಿಕೆಯಿಂದ ನಾನು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಸಹಕಾರ ನೀಡದಂತಾದರು ಎಂದು ಅವರ ಮನಸ್ಸಿನಲ್ಲಿ ನನ್ನ ಬಗ್ಗೆ ತಪ್ಪು ಅಭಿಪ್ರಾಯವನ್ನು ಹುಟ್ಟಿಸುವುದಕ್ಕೆ ಪ್ರಯತ್ನ ಮಾಡಿದ್ದೂ ಅಲ್ಲದೆ ನನ್ನ ಮನಸ್ಸಿಗೆ ನೋವು ಮತ್ತು ರಿಜಿಡಿಟಿಯನ್ನು ಉಂಟು ಮಾಡಿರುವುದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ. ನನ್ನ ಹಕ್ಕುಬಾಧ್ಯತೆಗಳಿಗೆ ಭಂಗ ಬರುವ ರೀತಿಯಲ್ಲಿ ಮಾಡಿದ್ದಾರೆ. ಬಹುಶಃ ಉತ್ತರ ಕೊಡುವ ಕಾಲದಲ್ಲಿ ಅವರು ಹೇಳುತ್ತಾರೆ ನಾನು ಆ ರೀತಿ ಹೇಳಿಲ್ಲ; ಮಾಮೂಲಾಗಿ ಅವರಿಗೆ ಟೂರ್ ಪ್ರೋಗ್ರಾಮ್ ಕಳಿಸಿದ್ದೆ ಎಂದು ಅದನ್ನು ನಾವು ಕಾದು ನೋಡಬೇಕಾಗಿದೆ. ಈ ವಿಚಾರದಲ್ಲಿ ನನ್ನ ಅನುಮಾನ ಇಷ್ಟೇ. ನಾನು ಈಗ ಹೇಳಿದ ಮಾತುಗಳನ್ನು ಮಾನ್ಯ ಮಂತ್ರಿಗಳು ನಿರಾಕರಿಸಬಹುದು. ಆದ್ದರಿಂದ ಈಗ ನಾನು ಹೇಳಿರತಕ್ಕ ಮಾತುಗಳು ಸತ್ಯವಾದವುಗಳು. ನಾನು ಹೇಳಿರತಕ್ಕ ಮಾತುಗಳಲ್ಲಿ ಸತ್ಯಾಂಶವೇನಾದರೂ ಇದ್ದರೆ ನನ್ನ ಮಾತುಗಳನ್ನು ನಂಬಿ. ಈ ಅಪಾದನೆಯನ್ನು ನಾನು ಜವಾಬ್ದಾರಿಯಿಂದ ಮಾಡಿದ್ದೇನೆ. ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡಬೇಕು. ನಾನು ಅಲ್ಲಿ ಸಾಕ್ಷೀಭೂತವಾಗಿ ರುಜುವಾತು ಮಾಡಬಲ್ಲೆ. ಪ್ರಿವಿಲೇಜ್ ಕಮಿಟಿಯಲ್ಲಿ ನಾನು ಎವಿಡೆನ್ಸ್ ಕೊಡಬೇಕಾಗುತ್ತದೆ. ಮಾನ್ಯ ಮಂತ್ರಿಗಳೂ ಎವಿಡೆನ್ಸ್ ಕೊಡಬೇಕಾಗುತ್ತದೆ. ಅವರು ನನ್ನ ಕ್ಷೇತ್ರದಲ್ಲಿ ನಡೆದಂತಹ ಸಭೆಯಲ್ಲಿ ಅಲ್ಲಿನ ಜನಗಳು ಅವರಿಗೆ ಅರ್ಪಿಸಿದ ಬಿನ್ನವತ್ತಳೆಗೆ ಉತ್ತರ ಕೊಡುತ್ತಾ ಈ ಮಾತುಗಳನ್ನು ಹೇಳಿದ್ದಾರೆ. ಕೆಲಸ ಮಾಡಿಕೊಡಿ ಅಂತ ಕೇಳಿದ್ದೀರಿ, ಮಾಡಬೇಕು ಅನಿಸುತ್ತದೆ. ಶ್ರೀ ತಿಮ್ಮಯ್ಯಗೌಡರು ಕೆಲಸ ಆಗಬೇಕೆಂದು ಹೇಳುತ್ತಲೇ ಇರುತ್ತಾರೆ. ನೀವು ಯಾರಿಗೆ ವೋಟು ಕೊಟ್ಟಿರಿ, ನಂಜೇಗೌಡರಿಗೆ ವೋಟು ಕೊಟ್ಟಿರಿ. ವಿರೋಧಪಕ್ಷಕ್ಕೆ ಕೊಟ್ಟರೆ ಏನಾಗುತ್ತದೆ. ಆಳು

ತ್ರಿರುವುದು ಕಾಂಗ್ರೆಸ್ ಪಕ್ಷ. ಇನ್ನು ಮುಂದಾದರೂ ಎಚ್ಚರಿಕೆಯನ್ನು ವಹಿಸಿ ಅಂತ ನನ್ನ ಮಿತ್ರರಿದುರಿಗೆ ಮಂತ್ರಿಗಳು ಹೇಳಿದ್ದಾರೆ. I do not know under what constitutional provisions he has done it. Anyway, as I have explained already, it is a breach of privilege as it has affected me in performing by duties as a Member of this House. ಆದುದರಿಂದ ಇದು ಪ್ರಿವಿಲೇಜು ಕಮಿಟಿಗೆ ಹೋಗಬೇಕು ಎಂದು ಹೇಳುತ್ತಿದ್ದೇನೆ. ಏತಕ್ಕೆಂದರೆ ಮಾನ್ಯ ಮಂತ್ರಿಗಳ ಪರಿಚಯ ನನಗೆ ಸುಮಾರು 19 ವರ್ಷಗಳಿಂದಲೂ ಇದೆ. ಮಾನ್ಯ ಮಂತ್ರಿಗಳೂ ಕೂಡ ನನ್ನ ಕ್ಷೇತ್ರಕ್ಕೆ ಬಂದಿದ್ದಾರೆ. ಗುಣಕ್ಕೇನೂ ಮತ್ಸರವಿಲ್ಲ ಎಂದು ಹೇಳುವಂತೆ ಇವರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ತಮಗೇ ಬಿಡುತ್ತೇನೆ. ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಮುಖ್ಯ ಮಂತ್ರಿಯಾದ ಮೇಲೂ ನನ್ನ ಕ್ಷೇತ್ರಕ್ಕೆ ಬಂದಿದ್ದಾರೆ ಮತ್ತು ಹಿಂದೆ ಪಿ.ಡಬ್ಲ್ಯು.ಡಿ ಮಂತ್ರಿಗಳಾಗಿದ್ದಾಗಲೂ ಬಂದಿದ್ದರು. ಹಾಗೇ ಶ್ರೀಮಾನ್ ನಾಡಗೌಡರು, ಬಿ. ಎಲ್. ಗೌಡರು ಎಲ್ಲರೂ ನನ್ನ ಕ್ಷೇತ್ರಕ್ಕೆ ಬಂದಿದ್ದಾರೆ. ನನಗೆ ಯಾರಲ್ಲೂ ದ್ವೇಷವಿಲ್ಲ ಮತ್ತು ಇರಲು ಕಾರಣವೂ ಇಲ್ಲ. ಈ ಸಭೆಯ ಸದಸ್ಯನಾಗಿ ಮತ್ತು ಇಲ್ಲಿರುವ ರೂಲ್ಸ್ ಆಫ್ ಪ್ರೊಸೀಜರುಗಳನ್ನೆಲ್ಲಾ ಓದಿ ತಿಳಿದುಕೊಂಡಿದ್ದೇನೆ ಮತ್ತು ಬಿ.ಎ.,ಬಿ.ಎಲ್. ವರೆಗೆ ವ್ಯಾಸಂಗ ಮಾಡಿದ್ದೇನೆ. ನನ್ನ ಹಕ್ಕಿಗೆ ಚ್ಯುತಿ ಬಂದಿರುವುದರಿಂದ ನಾನು ಇಲ್ಲಿ ಇದನ್ನು ಹೇಳಬೇಕಾಗಿ ಬಂದಿದೆ. ಆದರೆ ಏಕೆ ಹೇಳುತ್ತೇನೆ ಎನ್ನುವುದಕ್ಕೆ ಇಲ್ಲಿ ಒಂದು ಮಾತು ಹೇಳಬೇಕಾಗಿದೆ. ಹಾನಗಲ್ಲದಲ್ಲಿ 25 ದಿನ ಶ್ರಮದಾನ ಮಾಡುವಾಗ ಇಲ್ಲಿ ಕ್ಯಾಂಪ್ ಮಾಡುತ್ತೇನೆ ಎಂದು ಹೇಳಿ ಹೋಗಿದ್ದಾರೆ

4-00 P.M.

To promote party purposes this has wilfully been done. ತಾಲ್ಲೂಕು ಬೋರ್ಡು ಕ್ಯಾಂಡಿಡೇಟುಗಳನ್ನು ಹುಡುಕುವುದಕ್ಕಾಗಿ ಇಲ್ಲಿ ಬಂದಂತೆ ಕಾಣುತ್ತದೆ. ಹಾಗೆ ಹುಡುಕಬೇಕಾದರೆ ಖಾಸಗಿಯಾಗಿ ಹೋಗಬಹುದಾಗಿತ್ತು. ಸರಕಾರದ ಕೆಲಸದ ಮೇರೆ ಹಣ ಖರ್ಚು ಮಾಡಿಕೊಂಡು ಇವರುಗಳು ತಾಲ್ಲೂಕು ಬೋರ್ಡುಗಳ ಕ್ಯಾಂಡಿಡೇಟುಗಳ ಚುನಾವಣೆಯನ್ನೇ ಮಾಡುವುದಕ್ಕಾಗಿ ಬಂದಿದ್ದರು ಎಂದು ಕಾಣುತ್ತದೆ. ಇಲ್ಲಿ ನನ್ನ ಹಕ್ಕಿಗೆ ಚ್ಯುತಿ ಬಂದಿದೆ. ಆದುದರಿಂದ ಈ ವಿಷಯವನ್ನು ಪ್ರಿವಿಲೇಜು ಕಮಿಟಿಗೆ ಹೋಗುವಂತೆ ಮಾಡಬೇಕಾದ್ದು ಅಗತ್ಯ. ಅವರು ಆಡಿರತಕ್ಕ ಮಾತು ನಿಜವಾಗಿದೆಯೇ ಇಲ್ಲವೇ ಎನ್ನುವುದನ್ನು ಪ್ರೂವ್ ಮಾಡಬೇಕಾಗುತ್ತದೆ. ಅದನ್ನು ಮಾಡಲು ತಾವು ಈ ಮೊಷನ್‌ನ್ನು ಆಲೋ ಮಾಡಬೇಕೆಂದು ಕೇಳುತ್ತೇನೆ. ಶ್ರೀಮಾನ್ ನಾಗಪ್ಪನವರು ಇಲ್ಲಿ ಹೇಳಿದಂತಹ ಮಾತುಗಳನ್ನು ನಾನು ಇಲ್ಲಿ ಬಳಸಲು ಹೋಗುವುದಿಲ್ಲ. ನಾನು ನನ್ನ ಹೇಳಿಕೆಗಳನ್ನು ರುಜುವಾತು ಪಡಿಸಲು ತಕ್ಕ ರುಜುವಾತುಗಳನ್ನು ಕೊಡಬೇಕಾಗುತ್ತದೆ ಮತ್ತು ಅದನ್ನು ನನ್ನ ಕೆಲವು ಸ್ನೇಹಿತರುಗಳಿಂದ ಮತ್ತು ನನ್ನ ಕೆಲವು ಸ್ನೇಹಿತರುಗಳು ಇಲ್ಲಿರುವವರು ಕೂಡ ಸಹಾಯ ಮಾಡಬೇಕಾಗಿ ಬರುತ್ತದೆ. ಆದುದರಿಂದ ತಾವು ಇದಕ್ಕೆ ಕನ್‌ಸೆಂಟ್ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ಗ್ರಾಮಾಂತರ) —ಇದು ಪ್ರಿವಿಲೇಜು ಮೋಷನ್ ಆಗಲಿಲ್ಲ. ಬರೀ ಮೋಷನ್ ಎಂದಾಗುತ್ತದಲ್ಲ.

†ಶ್ರೀ ಕೆ. ಲಕ್ಕಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಸ್ಯಾಮೀ, ಈ ಸಭೆಯ ಮಾನ್ಯ ಸದಸ್ಯರಲ್ಲಿ ಒಬ್ಬರಾದ ಶ್ರೀಮಾನ್ ನಂಜೇಗೌಡರು ಈ ಸಭೆಯ ಮುಂದೆ ಒಂದು ಪ್ರಿವಿಲೇಜು ಮೋಷನ್ ಇಟ್ಟು ಅದಕ್ಕೆ ಕಾರಣಗಳನ್ನು ಕೊಡುತ್ತಾ ಕೆಲವು ದೂರುಗಳನ್ನು ತಂದಿದ್ದಾರೆ. ಇದರಲ್ಲಿ ಮೊದಲನೆಯದಾಗಿ ನಾನು ಪ್ರವಾಸ ಮಾಡುವ ಕಾಲದಲ್ಲಿ ಶಾಸನ ಸಭಾ ಸದಸ್ಯನಾದ ತನಗೆ ಆಫೊತ್ತು ಟೂರು ಪ್ರೋಗ್ರಾಂ ಕಳುಹಿಸದೇ ಬಂದಿದ್ದರು, ಎಂದು. ನಾನು ಅವರಿಗೆ ಟೂರು ಪ್ರೋಗ್ರಾಂನ್ನು ಕಳುಹಿಸಿಕೊಟ್ಟಿದ್ದೆ. ಆರಕಲಗೂಡು ತಾಲ್ಲೂಕಿಗೆ ಹೋಗಿದ್ದಾಗ ನಾನು ನನ್ನ ಜೊತೆಯಲ್ಲಿದ್ದ ಸ್ನೇಹಿತರನ್ನೂ ಕೇಳಿದೆ, ಮಾನ್ಯ ಸದಸ್ಯರಿಗೆ ನನ್ನ ಟೂರು ಪ್ರೋಗ್ರಾಂ ಕಳುಹಿಸಿದ್ದೆ, ಅವರು ಬರದೇ ಇರುತ್ತಿರಲಿಲ್ಲ. ಇಲ್ಲಿಯವರೆಗೂ ಬಾರದೇ ಇರಲು ಕಾರಣವೇನೋ ತಿಳಿಯಲಿಲ್ಲ ಎಂದು. ಆಮೇಲೆ ನನ್ನ ಪರ್ಸನಲ್ ಅಸಿಸ್ಟೆಂಟ್‌ರವರನ್ನು ಮಾನ್ಯ ಸದಸ್ಯರಿಗೆ ಟೂರು ಪ್ರೋಗ್ರಾಂ ಕಳುಹಿಸಿದ್ದರೋ ಇಲ್ಲವೋ ಎಂದು ಕೇಳಿದಾಗ ಅವರು ಪ್ರತಿಯೊಂದು ಸಂದರ್ಭದಲ್ಲಿಯೂ ಎಲ್ಲರಿಗೂ ನೋಟೀಸು ಕಳುಹಿಸುವಂತೆ ಇವರಿಗೂ ಕಳುಹಿಸಿಕೊಡಲಾಗಿದೆ ಎಂದು ಹೇಳಿದರು.

(Interruption by Sri Vatal Nagaraj)

ಶ್ರೀ ಕೆ. ಲಕ್ಕಪ್ಪ.—ಅನಂತರ ನಾನು ಹೊಳೆನರಸೀಪುರಕ್ಕೆ ಹೋದಾಗ ನನ್ನ ಸ್ನೇಹಿತರಾದ ಶ್ರೀಮಾನ್ ಹೆಚ್. ಡಿ. ದೇವೇಗೌಡರು ಇಲ್ಲಿನ ಮಾನ್ಯ ಸದಸ್ಯರಾದುದರಿಂದ ಅವರನ್ನೂ ನನ್ನ ಟೂರು ಪ್ರೋಗ್ರಾಂ ಬಂದಿತ್ತೇ ಎಂದು ಕೇಳಿದಾಗ ನನಗೆ ಬಂದಿತ್ತು ಎಂದು ಅವರು ಹೇಳಿದರು. ಇದರಿಂದ ಇವರಿಗೂ ಕಳುಹಿಸಿದ್ದಾರೆ ಎನ್ನುವುದನ್ನು ನಾನು ನಂತರ ಕನ್‌ಫರ್ಮ್ ಮಾಡಿಕೊಂಡೆ. ಪ್ರಾಯಶಃ ನಾನು ಕಳುಹಿಸಿದ ಟೂರು ಪ್ರೋಗ್ರಾಂ ಬಂದಾಗ ಮಾನ್ಯ ಸದಸ್ಯರು ಊರಿನಲ್ಲಿರಲಿಲ್ಲವೋ ಏನೋ ಅದೇಕೆ ಟೂರು ಪ್ರೋಗ್ರಾಂ ತಲಪಲಿಲ್ಲವೋ ಗೊತ್ತಾಗಲಿಲ್ಲ. ಅನಂತರ ನಾನು ಇಲ್ಲಿಗೆ ಬಂದ ಮೇಲೆ ನನ್ನ ಆಫೀಸಿನಲ್ಲಿ ಎನ್‌ಕ್ವೈರಿ ಮಾಡಿದಾಗ ಯಾರು ಯಾರಿಗೆ ಟೂರು ಪ್ರೋಗ್ರಾಂ ಕಳುಹಿಸಿದೆ ಎಂದು ರಿಜಿಸ್ಟರು ನೋಡಿದಾಗ ಸುಮಾರು 70 ಜನಕ್ಕೆ ಮಾಮೂಲಿನಂತೆ ಟೂರು ಪ್ರೋಗ್ರಾಂ ಕಳುಹಿಸಿದ್ದರು. ಇದರಲ್ಲಿ ಮಾನ್ಯ ಸದಸ್ಯರ ಹೆಸರು ಆರನೆಯದ್ದಾಗಿತ್ತು. ಇದರಿಂದ ಎಲ್ಲ ಕಡೆಗಳಿಗೂ ನಾನು ಪ್ರವಾಸ ಹೋಗುವುದಕ್ಕೆ ಮುಂಚೆ ಅವರ ನೋಟೀಸನ್ನು ಕಳುಹಿಸುವುದು ಅನೂಚಾನವಾಗಿ ನಡೆದುಕೊಂಡು ಬರುವಂತೆ ಈಗಲೂ ನಡೆಯುತ್ತಿದೆ. ಅಲ್ಲದೆ ಇದುವರೆಗೂ ನಾನು ಪ್ರವಾಸ ಮಾಡಿದಾಗಲೇ ಆಗಲಿ ಅಥವಾ ಇಲ್ಲಿಯೇ ಆಗಲೀ ಯಾವ ಸದಸ್ಯರೂ ನನಗೆ ಟೂರು ಪ್ರೋಗ್ರಾಂ ಬಂದಿಲ್ಲ ಎನ್ನುವ ದೂರು ಬಂದಿಲ್ಲ ಮತ್ತು ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರಿಂದಲೂ ಬರಲಿಲ್ಲ.

ಶ್ರೀ ಅಜೀಜ್ ಶೇಟ್.—ಈಚೆಗೆ ಒಂದು ಸೇತುವೆಯನ್ನು ಹುಲ್ಲಹಳ್ಳಿ ಬಳಿ ಉದ್ಘಾಟನೆ ಮಾಡಲು ಬಂದಿದ್ದಾಗ ನನಗೂ ಮಾನ್ಯ ಸಚಿವರ ಟೂರು ಪ್ರೋಗ್ರಾಂ ಬರಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಎರಡನೇ ಪ್ರಶ್ನೆ ನಾನು ಪ್ರವಾಸ ಮಾಡಿದ ಕಾಲದಲ್ಲಿ ಮಾನ್ಯ ಸದಸ್ಯರಾದ ನಂಜೇಗೌಡರು ಈ ಸಭೆಯ ಸದಸ್ಯರಾಗಿ ಚುನಾಯಿತರಾಗಲು ಅನರ್ಹರು ಇಂತಹವರಿಗೆ ವೋಟು ಮಾಡುವುದಕ್ಕೆ ಹೋಗುತ್ತಾರೆ ಎನ್ನುವ ಮಾತುಗಳನ್ನು ಹೇಳಿದ್ದಾರೆ. ಇದು ಸತ್ಯಕ್ಕೆ ಬಹು ದೂರವಾದ ಮಾತು ಎಂದು ನಾನು ಹೇಳಬಯಸುತ್ತೇನೆ. ಹಾಗಿದ್ದರೆ ನಾನು ಪ್ರವಾಸ ಮಾಡಕ್ಕ ಕಾಲದಲ್ಲಿ ನನ್ನ ಭಾಷಣಗಳೆಲ್ಲವೂ ನಾರ್ಕಾರು ಪತ್ರಿಕೆಗಳಲ್ಲಿ ಬಂದಿವೆ ಅವರು ಪ್ರಕಟಣೆ ಮಾಡುವಾಗ ಇಂತಹ ದೂರುಗಳೇನಾದರೂ ಇದ್ದರೆ ಅದನ್ನೂ ಪ್ರಕಟಿಸುತ್ತಿದ್ದರು. ಯಾವ ಪತ್ರಿಕೆಯಲ್ಲೂ ಇಂತಹ ದೂರುಗಳು ಬಂದಿಲ್ಲ ಮತ್ತು ಯಾವ ಪತ್ರಿಕೆಗಳವರೂ ಇದರ ಬಗ್ಗೆ ಹೇಳಿಲ್ಲ. ಹೀಗಿರತಕ್ಕ ಕಾಲದಲ್ಲಿ ಮಾನ್ಯ ಸದಸ್ಯರಾದ ಶ್ರೀ ನಂಜೇಗೌಡರು ಯಾವ ಆಧಾರದ ಮೇಲೆ ಸತ್ಯಾಂಶಗಳ ಅರಿವು ಮಾಡಿಕೊಂಡು ಇದನ್ನು ಈ ಸಭೆಯ ಮುಂದೆ ಇಟ್ಟಿದ್ದಾರೋ ನನಗಾದರೂ ಅರ್ಥವಾಗುತ್ತಿಲ್ಲ. ಇದರಲ್ಲಿ ನನ್ನ ಹೆಸರನ್ನು ತೆಗೆದುಕೊಂಡು ಇಲ್ಲಿ ಹೇಳಿರುವುದರಲ್ಲಿ ಯಾವ ಸತ್ಯಾಂಶವೂ ಇಲ್ಲ ಎಂದು ಹೇಳಬಯಸುತ್ತೇನೆ. ಪ್ರಾಯಶಃ ಅಲ್ಲಿ ಯಾರೋ ಕಿತಾಪತಿ ಮಾಡುವ ಜನ ಇದ್ದಾರೆ, ಅವರು ನಮ್ಮಿಬ್ಬರ ಸ್ನೇಹವನ್ನು ಕೆಡಿಸಬೇಕು ಎನ್ನುವ ದೃಷ್ಟಿಯಿಂದ ಅವರಿಗೆ ಹಾಗೆ ಹೇಳಿರಬಹುದು. ಅವರು ಆ ಒಂದು ತಪ್ಪು ಅಭಿಪ್ರಾಯದ ಆಧಾರದ ಮೇಲೆ ಈ ರೀತಿಯಾದ ಮಾತನ್ನು ಇಲ್ಲಿ ಹೇಳಿದ್ದಾರೆಂದು ನನಗೆ ಭಾಸವಾಗುತ್ತದೆ. ಇದರಲ್ಲಿ ಅವರು ಯಾರೋ ಹೇಳುವ ಎರಡನೇ ಮಾತನ್ನು ಕೇಳಿಕೊಂಡು ಇಲ್ಲಿ ಹೇಳಿದ್ದಾರೆ. ಇದಕ್ಕಾಗಿ ನಾನು ಅವರನ್ನು ಅಕ್ಷೇಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲದೆ ಇದರಲ್ಲಿ ನನ್ನ ಸ್ವಂತವಾದ ವಿಚಾರಗಳ ಬಗ್ಗೆ ಬಹಳ ಕಠಿಣವಾದ ಟೀಕೆ ಮಾಡಿದ್ದಾರೆ. ಇವು ಸತ್ಯಾಂಶಕ್ಕೆ ದೂರವಾದ ಮಾತುಗಳು. ನನ್ನ ಗೌರವ ಘನತೆ ನನ್ನ ಪ್ರಮಾಣಿಕತೆ ಹಾಗೂ ನನ್ನ ಭಾವನೆಗಳಿಗೆ ಚ್ಯುತಿ ಬರುವಂತೆ ಇಲ್ಲಿ ಒಂದೆರಡು ಮಾತುಗಳನ್ನು ಹೇಳಿದರು. ಹಾಗೂ ಇಲ್ಲಿ ಮುರಗಳನ್ನು ಮಾರಾಟ ಮಾಡಿದರು ಹಾಗೂ ಗೊಬ್ಬರ ಇತ್ಯಾದಿಗಳನ್ನು ಮಾರಾಟ ಮಾಡಲಕ್ಕೆ ಹೋದರು ಇತ್ಯಾದಿ ಕೆಲವು ಮಾತುಗಳನ್ನು ಹೇಳಲು ಹೋಗಿದ್ದಾರೆ. ಆದರಲ್ಲೂ ಯಾವ ಆಧಾರವಿಲ್ಲದೆ ಇಂತಹ ಆಡಬಾರದ ಮಾತುಗಳನ್ನು ಆಡಿದ್ದಾರೆ. ಈ ಮಾತುಗಳು ಈ ಸಭೆಯ ಪ್ರೊಸೀಡಿಂಗ್ಸ್‌ನಲ್ಲೂ ನಮೂದಾಗಿವೆ. ಇದನ್ನು ಈ ಸಭೆಯ ಪ್ರೊಸೀಡಿಂಗ್ಸ್‌ನಿಂದ ತೆಗೆಯಬೇಕು ಎಂದು ನಾನು ಇಲ್ಲಿ ಹೇಳಬೇಕಾಗಿದೆ. ಸತ್ಯ ಎನ್ನುವ ಮಾತನ್ನು ಪ್ರತಿಪಾದನೆ ಮಾಡಬೇಕು ಎಂದು ಅದನ್ನು ಇಲ್ಲಿ ಟೇಬಲ್ಲನ್ನು ಕುಟ್ಟಿ ಅದನ್ನು ಪ್ರತಿಪಾದನೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಒಂದು ಸಮಿತಿಯನ್ನು ಇದಕ್ಕಾಗಿ ನೇಮಕ ಮಾಡಿ, ಆಗ ಇದನ್ನು ರುಜುವಾತು ಮಾಡಿದರೆ ತಾವು ರಾಜೀನಾಮೆ ಕೊಡಬೇಕು, ಏನು ಹೇಳುತ್ತೀರಿ.....

ಶ್ರೀ ಕೆ. ಲಕ್ಕಪ್ಪ—ಹಾಗೆಲ್ಲಾ ಇಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಇಲ್ಲಿ ಎಲ್ಲರೂ ಸಭೆಯ ಗೌರವ ಘನತೆಗಳನ್ನು ತಿಳಿದು ಮಾತನಾಡಬೇಕು.....

ಶ್ರೀ ವಾಟಾಳ್ ನಾಗರಾಜ್.–ನಿಮಗೆಲ್ಲ ಅಷ್ಟು ಧೈರ್ಯ ಏದೆ, ಆಗಲಿ, ಸಮಿತಿಯನ್ನು ನೇಮಕ ಮಾಡುತ್ತೇವೆ ಎಂದು ಏಕೆ ಹೇಳುತ್ತಿಲ್ಲ ?

Mr. SPEAKER.—The Hon'ble Members may kindly resume their seats. No Hon'ble Member should rise unless he is called by the Chair.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅವರು ಸತ್ಯಕ್ಕೆ ದೂರವಾದ ಮಾತುಗಳನ್ನು ಆಡುತ್ತಿದ್ದಾರೆ ನಾನು ಹೇಳತಕ್ಕ ಎರಡೇ ಎರಡು ಮಾತುಗಳನ್ನು ತಾವು ದಯವಿಟ್ಟು ಕೇಳಬೇಕು.....

Mr. SPEAKER.—The Hon'ble Member may please resume his seat.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾವು ತಮಗೇನು ಗೌರವ ಕೊಡಬೇಕೋ ಅದನ್ನು ಕೊಡುತ್ತೇವೆ.

Sri B. P. GANGADHAR.—Sir, I have a point of order.

Mr. SPEAKER.—There cannot be any point of order unless the order in the House is restored. If the member persists, I will adjourn the House.

Sri G. V. MAGAVI.—Sir, the Hon'ble Minister should be allowed to speak. He should not be interrupted by any Member.

Mr. SPEAKER.—The Hon'ble Member may kindly resume his seat.

Sri SHARANAGOUDA INAMDAR.–Sir, the Hon'ble Minister instead of expressing his views on the motion, he is going away from the motion and substantiating the charges made against him.

ಶ್ರೀ ಕೆ. ಲಕ್ಕಪ್ಪ.—ಅವರು ಈ ಸಭೆಯಲ್ಲಿ ಆ ಒಂದು ಪ್ರಿವಿಲೇಜ್ ಮೋಷನ್ ಬಗ್ಗೆ ಎಷ್ಟು ಮಾತನಾಡಬೇಕೋ ಅದಕ್ಕಿಂತಲೂ ಜಾಸ್ತಿಯಾಗಿ ಮಾತನಾಡಿದ್ದಾರೆ. ಹಾಗೆ ಮೇರೆ ಮೀರಿ ಮಾತನಾಡಿರತಕ್ಕದ್ದನ್ನು ವರದಿಯಿಂದ ತೆಗೆದು ಹಾಕಬೇಕು. ಅಲ್ಲದೆ ಅವರು ಎತ್ತಿರುವ ವಿಷಯ ಆಗಲೇ ಕೋರ್ಟಿನಲ್ಲಿ ತೀರ್ಮಾನವಾಗಿದೆ. ಅದನ್ನು ಮತ್ತೆ ಪ್ರೂವ್ ಮಾಡುತ್ತೇವೆ ಅನ್ನುವುದರಲ್ಲಿ ಅರ್ಥವಿಲ್ಲ. ಅವರು ಇಲ್ಲಿ ಹೇಳಿರತಕ್ಕ ಮಾತುಗಳೆರ್ನಾ ಬರಿ ಹಿಯರ್‌ಸೇ ಮೇಲೆ ಹೇಳಿರತಕ್ಕವುಗಳಾಗಿವೆ. ಅವರು ಆ ಪ್ರಿವಿಲೇಜ್ ಮೋಷನ್ನಿಗಿಂತ ಇಲ್ಲಿ ಹೆಚ್ಚಿಗೆ ಮಾತನಾಡಿರುವುದರಿಂದ ಆ ಮಾತುಗಳನ್ನು ಅಧಿಕೃತ ವರದಿಯಿಂದ ತೆಗೆದುಹಾಕಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—An opportunity was given to Mr. Nanje Gowda to speak and while speaking he has referred to many points and I did not object to it. Similarly, when the Hon'ble Minister is making a statement the members may give a patient hearing.

Sri K. H. RANGANATH.—The Hon'ble Minister has thrown a challenge. The Hon'ble Member Mr. Vatal Nagaraj has said that if it is substantiated is the Hon'ble Minister going to resign ?

Mr. SPEAKER.—Is it necessary to say that ?

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಸ್ವಾಮಿ, ನಾನು ಈ ಸಭೆಗೆ 1957 ರಿಂದ 1962ರವರೆಗೂ ಸದಸ್ಯನಾಗಿದ್ದೆ. ಆಗ ನಾನು ಇದೇ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಚರ್ಚೆಗಾಗಿ ತಂದಿದ್ದೆ. ಆಗ ಶ್ರೀ ಕೆ. ಎಫ್. ಪಾಟೀಲರು ಅರಣ್ಯ ಮಂತ್ರಿಗಳಾಗಿದ್ದರು. ಶರಾವತಿ ವ್ಯಾಲಿಯಲ್ಲಿ ಹೊನ್ನೆಮರಡು ಯೋಜನೆಯ ಸಂಬಂಧದಲ್ಲಿ ಮರಗಳನ್ನು ಕಡಿಯುವುದಕ್ಕೆ ಯಾರಿಗಾದರೂ ಅವಕಾಶ ಕೊಡರಾಗಿತ್ತೆ, ಹಾಗೆ ಕೊಟ್ಟಿದ್ದರೆ ಯಾರು ಯಾರಿಗೆ, ಎಲ್ಲೆಲ್ಲಿ ಅವಕಾಶ ಕೊಡರಾಗಿತ್ತು, ಯಾರು ಯಾರಿಗೆ ಎಷ್ಟೆಷ್ಟು ವಿಸ್ತೀರ್ಣ ಭೂಮಿಯನ್ನು ಮರ ಕತ್ತರಿಸಲು ಕೊಡರಾಗಿತ್ತು, ಅಲ್ಲಿ ಯಾರಾದರೂ ಅಕ್ರಮವಾಗಿ ಕದ್ದು ಮರವನ್ನು ಕಡಿದು ಮಾರಾಟ ಮಾಡಿದ ವಿಷಯ ಸರ್ಕಾರ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ದವರ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಒಂದು ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಮರ ಕಳವಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅವೆರ್ಲಾ ಪ್ರಿಂಟಾಗಿದೆ. ಆ ವಿಚಾರ ನಮ್ಮ ಪ್ರೊಸೀಡಿಂಗ್ಸ್ ಪುಸ್ತಕದಲ್ಲಿ ಅಚ್ಚಾಗಿದೆ. ಹಾಗಿದ್ದರೂ ಅದನ್ನೆಲ್ಲಾ ಸುಳ್ಳು ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ.

†ಶ್ರೀ ಹೆಚ್. ಎನ್. ನಂಜೇಗೌಡ.—ಮಾನ್ಯ ಸಭಾಪತಿಗಳೇ, ಅವರು ಟೂರ್ ಪ್ರೋಗ್ರಾಂ ಕಳುಹಿಸದೇ ಇರತಕ್ಕ ವಿಷಯದಲ್ಲಿ ಇಲ್ಲಿ ಮಾತನಾಡುತ್ತಾ ಅದನ್ನು ನಿರಾಕರಿಸಿದ್ದಾರೆ. ಈಗ ನಾನು ಕಳುಹಿಸಿರತಕ್ಕ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ಹಾಕಿದರೆ ಇಲ್ಲಿ ಏನೇನು ಹೇಳಿದ್ದೆನೋ ಅದನ್ನೆಲ್ಲಾ ಸಾಬೀತು ಮಾಡತಕ್ಕ ಜವಾಬ್ದಾರಿ ನನಗೆ ಬಿಟ್ಟದ್ದು, ಇದು ಒಂದನೆಯ ವಿಷಯ. ಎರಡನೆಯದಾಗಿ ನಾನು ಮಾಡಿರತಕ್ಕ ಎರಡು ಅಪಾವನೆಗಳನ್ನೂ ನಿರಾಕರಿಸುತ್ತಾ ಮಾನ್ಯ ಮಂತ್ರಿಗಳು ಇತರ ಸಂಬಂಧದಲ್ಲಿ ನಡೆದಿರತಕ್ಕ ವಿಷಯಗಳನ್ನೆಲ್ಲಾ ವರದಿಯಿಂದ ತೆಗೆದುಹಾಕಬೇಕೆಂದು ಕೂಡ ಹೇಳಿದ್ದಾರೆ. ಹಾಗೆ ಮಾಡಕೂಡದು, ಇದೇ ಸಭೆಯಲ್ಲಿ ಮಾನ್ಯ ಸ್ನೇಹಿತರಾದ ಶ್ರೀಮಾನ್ ರಾಜಯ್ಯಶೆಟ್ಟರು ಹಿಂದೆ ಕಳುಹಿಸಿದ ಪ್ರಶ್ನೆಗೆ ಉತ್ತರವಾಗಿ ಅಂದಿನ ನಮ್ಮ ಮೈಸೂರು ಸರ್ಕಾರದವರು ಹೊನ್ನೆಮರಡು ಯೋಜನೆಯಿಂದ ಭಾರತ್ ಟ್ರೇಡಿಂಗ್ ಕಂಪೆನಿಯವರು ಒಂದು ಲಕ್ಷ ಘನ ಅಡಿಗಿಂತಲೂ ಹೆಚ್ಚಾಗಿ ಮರವನ್ನು ಕದ್ದು ಮಾರಿದ್ದಾರೆ ಎಂದು ಹೇಳಿದ್ದಾರೆ, ಇದಕ್ಕಿಂತಲೂ ಹೆಚ್ಚು ಎವಿಡೆನ್ಸ್ ಮಾನ್ಯ ಮಂತ್ರಿಗಳಿಗೆ ಏನು ಬೇಕು ?

ಮಾನ್ಯ ಸಭಾಪತಿಗಳೇ, ಒಂದು ಅಂಶವನ್ನು ಮಾತ್ರ ಒಪ್ಪಿಕೊಳ್ಳಬೇಕಾಗುತ್ತದೆ. ಅವರ ಪಾರ್ಟ್‌ನರ್ಸ್ ನಾಲ್ಕು ಜನರ ಹೆಸ್ರಿಕೆ ಅವರ ಹೆಂಗಸರ ಹೆಸರೂ ಕೂಡ ಇದೆ ಎಂಬುದು ಪತ್ರಿಕೆಗಳಲ್ಲೂ ಕೂಡ ಬಂದಿದೆ. ಅದನ್ನು ಪ್ರೊಡ್ಯೂಸ್ ಮಾಡಿ ಎಂದರೆ ಮಾಡುತ್ತೇನೆ. ಪ್ರೊಡ್ಯೂಸ್ ಮಾಡುವುದಕ್ಕೆ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತೇನೆ. ಲಕ್ಕಪ್ಪನವರು ವ್ಯವಹಾರ ಮಾಡಿದ್ದೇ ಬೇರೆ, ಅವರ ಹೆಂಡತಿ ಹೆಸರಿನಲ್ಲಿ ವ್ಯವಹಾರ ಮಾಡಿದರೆ ಬೇರೆ, ಅಂತ ಹೇಳಿ ಈ ರಾಜಕೀಯದಲ್ಲಿ ಭಾವನೆ ಮಾಡುವುದಕ್ಕೆ ಆಗುವುದಿಲ್ಲ. ನನ್ನ ಹೆಂಡತಿಯ ಹೆಸರಿನಲ್ಲಿ ನಾನು ಏನಾದರೂ ಮಾಡಿದ್ದರೆ ಅದೂ ಕೂಡ ನಾನು ಮಾಡಿದ ಅಪರಾಧವೇ, ಅವಳು ಸಹಭಾಗಿನಿ, ಅರ್ಧಾಂಗಿನಿ, ನಮ್ಮ ಹಿಂದೂ ಧರ್ಮ ಕೂಡ ಅದೇ ರೀತಿ ಹೇಳುತ್ತದೆ. ಆದ್ದರಿಂದ ಅವರ ಶ್ರೀಮತಿಯವರ ಹೆಸರಿನಲ್ಲಿ ಅವರು ಪಾಲು ಗೊಂಡಿದ್ದರೆ ಅವರ ಜವಾಬ್ದಾರಿ ಬೇರೆ ಬೇರೆಯಾಗುವುದಿಲ್ಲ. ಶ್ರೀಮಾನ್ ರಾಜಯ್ಯಶೆಟ್ಟರ ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರೇ ಒಪ್ಪಿಕೊಂಡಿದ್ದಾರೆ, ಒಂದು ಲಕ್ಷ ಘನ ಅಡಿ ಮರವನ್ನು ಅವರು ಕೊಟ್ಟಿಂಥ ಸ್ಥಳ ಬಿಟ್ಟು ಬೇರೆ ಕಡೆ ಕಡಿದಿದ್ದಾರೆಂದು. ಅವರು ಮಾಡಿರತಕ್ಕ ವ್ಯವಹಾರವನ್ನು ಕ್ರಮ ಬದ್ಧಗೊಳಿಸುವುದಕ್ಕೆ ಬೇಕಾದಷ್ಟು ಕಾರಣಗಳನ್ನು ಕೊಟ್ಟಿದ್ದಾರೆ. ಗೊಬ್ಬರ ಕೂಡ ಕದ್ದು ಮಾರಾಟ ಮಾಡಿದ್ದರ ಬಗ್ಗೆ ಚನ್ನಬಸಪ್ಪನವರು ಕೇಸು ಹಾಕಿದ್ದರು. ಅದು ಶ್ರೀ ನಿಜಲಿಂಗಪ್ಪನವರ ಕಾಲದಲ್ಲಿ ಮಾಯವಾಯಿತು ಎಂದರೆ ಇದಕ್ಕೆ ಯಾರು ಜವಾಬ್ದಾರರು ? ಅವರ ಲಾಯರ್ಯಲ್ಲಿ ಹಾಕಿಕೊಂಡು ಬರುತ್ತಾ ಇದ್ದಂಥ ಗೊಬ್ಬರವನ್ನು ಬೆಂಗಳೂರಿನಲ್ಲಿ ಹೇಗೆ ಹಿಡಿದರು ? ಚಿಕ್ಕಮಗಳೂರಿನಲ್ಲಿ ಹೇಗೆ ಹಿಡಿದರು ? ಅದರ ಮೇಲೆ ಕೇಸು ರಿಜಿಸ್ಟರ್ ಆಗಿರಲಿಲ್ಲವೇ ? ಮಾನ್ಯ ಸಭಾಪತಿಗಳೇ ಈ ನನ್ನ ಮಾತುಗಳನ್ನು ಖುದ್ದು ಜವಾಬ್ದಾರಿಯನ್ನು ಅರಿತು ಹೇಳುತ್ತಾ ಇದ್ದೇನೆ. ಆದ್ದರಿಂದ ನಾನು ಕಳುಹಿಸಿರತಕ್ಕ ಈ ಪ್ರಿವಿಲೇಜ್ ಮೋಷನ್‌ನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಲು ತಾವು ಅವಕಾಶ ಕೊಟ್ಟರೆ ಇಲ್ಲಿ ಮಾತನಾಡಿರತಕ್ಕ ಮಾತುಗಳಿಗೆ ಸೂಕ್ತ ಆಧಾರಗಳ ಮುಖಾಂತರ ಪ್ರೂವ್ ಮಾಡುವುದಕ್ಕೆ ಬದ್ಧನಾಗಿದ್ದೇನೆ ಎಂದು ಹೇಳಿ ಇದಕ್ಕೆ ತಮ್ಮ ಅನುಮತಿಯನ್ನು ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

QUESTION OF PRIVILEGE BY SRI L. SRIKANTAIAH

†ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ ಈ ಸಭೆಯ ಗಮನಕ್ಕೆ ನಾನು ಕಳುಹಿಸಿರತಕ್ಕ ಈ ಹಕ್ಕು ಲೋಪದ ಒಂದು ನಿರ್ಣಯವನ್ನು ಕಳುಹಿಸುತ್ತಲೇ ಇರಲಿಲ್ಲ ಆವರೆ ನಡೆದ ಘಟನೆಯನ್ನು ನೆನೆಸಿಕೊಂಡರೆ ಇದರಿಂದ ಮಹತ್ತರವಾದ ಪರಿಣಾಮವುಂಟಾಗುತ್ತದೆ, ನಾವು ನಮ್ಮ ಕ್ಷೇತ್ರದಲ್ಲಿ ನಮ್ಮ ಕಾರ್ಯಾಚರಣೆಯನ್ನು ಮಾಡುವುದಕ್ಕೆ ತೊಂದರೆಯಾಗುತ್ತಾ, ಇದೆ, ಇದರಿಂದ ನಮ್ಮ ಹಕ್ಕಿಗೆ ಲೋಪ ಬರುತ್ತಾ ಇದೆ ಎಂಬ ಕಾರಣದಿಂದ.....